ಮೈಸೂರ ಗಿಜಿಟ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ ಜೂರ್ ತಾ|| 14, ಸ್ರ್ 1890.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೆಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. (1) ತಾರೀಖು 9ನೇ ಜೂರ್ 1890.

ಇನಾಂದಾರ್ರಿಗೆ ಇದರಿಂದ ತಿಳಿಸುವದೇನಂದರೆ, ಕಡೂರು ತಾಲ್ಲೂಕಿನಲ್ಲಿ ಇರತಕ್ಕ ಜಿಲ್ಲರೆ ಇನಾಂಗಳ ಬಾಬತು (136) ಫೈನಲ್ ಟೈಟಲ್ ಡೀಡ್‌ಗಳ ಯಾನೆ ಕಾಯಂ ಪಟ್ಟೆಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್ ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಏರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರರು ಅಂಥಾ ನೋಟಿಸ್‌ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಮೇಲ್ಕಂಡ ಜಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಕೊಡಲ್ಪಟ್ಟ ಪಟ್ಟೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ಯಾಂಟ್,
ಸೂ|| ಆಫ್ ಇನಾಂ ಸೆಟಲ್‌ಮೆಂಟ್ಸ್.

ಫಾರೆಸ್ಟ್ ಇಲಾಖಾ.

ತಾರೀಖು 12ನೇ ಜೂರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಾರ್ಕಕೋಟೆ ಬೇರಂಬಾಡಿ ಮತ್ತು ಆಯನೂರು ಮೂರಿಗುಡಿ ಫಾರೆಸ್ಟ್‌ಗಳಲ್ಲಿ ಸರ್ಕಾರಮೂಲಕ ಆನೇಶಿಕಾರಿ ಕೆಲಸಗಳು ನಡಿಯುವದರಿಂದ ಇನ್ನೊಂದು ನೋಟಿಸ್‌ಕೊಡುವವರಿಗೂ ಸದರೀ ಜಂಗಲ್‌ಗಳಲ್ಲಿ ಯಾವ ವಿಧವಾದ ಶಿಕಾರಿಯೂ ನಿಷೇಧಿಸಲ್ಪಟ್ಟು ಯಿರುತ್ತೆ.

ಶಿಕಾರಿ ಬಗ್ಯೆ ಸದರಿ ಜಂಗಲ್‌ಗಳಿಗೆ ಪ್ರವೇಶಿಸುವ ಜನಗಳು ಪ್ರಾಸಿಕ್ಯೂಷನಿಗೆ ಪಳಪಡುವರು.

ನೋಟಿಫಿಕೇಷ೯.

ತಾರೀಖು 9ನೇ ಮೇ 1890.

ಇದರಿಂದ ಸಕಲಜನರಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗಾ ಫಾರೆಸ್ಟ್ರಿ ರೇಂಜ್ ವುತ್ಪತ್ತಿಯಾಗಿರುವ ಈ ಕೆಳಗೆ ನಮೂರಿಸಿರುವ ನಾಟಾಗಳು ಬಾಜಾದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಆಯಾ ಡಿಪೋದಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರ್.	ಡಿಪೋ ಹೆಸರು.	ಹರಾಜು ತಾರೀಖು.	ಅದದು.	ವಿವರ ವಗೈರೆ.
1	ಕಣಬೂರು ..	21—6—90	150	ಜಂಗ್ಲೀನಾಟಾ ಮುಖ್ಯವಾಗಿ ಹೊನ್ನೆ ಮತ್ತು ಮತ್ತಿ.
2	ಸಮುದ್ರದಹಳ್ಳಿ ..	23—6—90	500	
3	ಶಿವಮೊಗ್ಗಾ ..	25—6—90	200	ಸಾಗವಾನಿ ಮತ್ತು ಜಂಗ್ಲಿನಾಟಾಗಳು ಮತ್ತು ತುಕಡೆಗಳು ಸಹ.
4	ಆಯನೂರು ..	27—6—90	400	
		ಜುಮ್ಲಾ	1250	

ಷರತ್ತುಗಳು—ಸ೯ 1887ನೇ ಇಸವಿ ಆಗಸ್ಟ್ 30ನೇ ವಸ್ತುಂ 99ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷ೯ ನೋಡಿ ಕೊಳ್ಳತಕ್ಕದ್ದು.

ಸದರೀ ನೋಟಿಫಿಕೇಷ೯ ಹರಾಜ್ ಕಾಲದಲ್ಲಿ ಓದಲ್ಪಡುವದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಷಹರ್ ಮಜಕೂರ್ ಕೋಟೇಲಿ ಇರುವ ಈ ಕೆಳಗೆ ತಪಶೀಲ್ ಮಾಡಿ ಯಿರುವ ಕಟ್ಟಡಗಳು 1890ನೇ ಇಸವಿ ಜುಲೈ 7ನೇ ತಾರೀಖು ಸೋಮುವಾರ ದಿನ ಸಿಟಿ ಮ್ಯುನಿಸಿಪೆಲ್ ವೈಸ್ ಪ್ರೆಸಿಡೆಂಟರವರ ಸಮಕ್ಷಮ ಆ ಸ್ಥಳದಲ್ಲಿ ಹರಾಜು ಮಾಡಲ್ಪಡುತ್ತೆ. ಹರಾಜ್ ಸದರೀ ತಾರೀಖು ದಿವಿ 12 ಘಂಟೆಗೆ ಷುರು ಮಾಡಿ ಹರಾಜಿನಲ್ಲಿ ಜಡ ದರಖಾಸ್ತು ಮಾಡಿದವರಿಗೆ ಬಿಡಲ್ಪಡುತ್ತೆ.

2. ಹರಾಜಿನಲ್ಲಿ ಪಡದವನು ಕೂಡ್ಲೆ ಜಡ ದರಖಾಸ್ತು ಮೊಬಲಗ ಪೈಕಿ ಕೇಕಡಾ 25ರ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಬಾಕಿ ಮೊಬಲಗು ಪಾವತಿ ಮಾಡಬೇಕು, ತಪ್ಪಿದಲ್ಲಿ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಡುವದು.

3. ವಾಯಿದೆ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದೇಲೂ ಬಾಕಿ ಮೊಬಲಗು ಪಾವತಿ ಮಾಡದೇಲೂ ತಪ್ಪಿದರೆ ಈ ಕಟ್ಟಡಗಳು ಪುನಹ ಹರಾಜು ಮಾಡಲ್ಪಡುವವು. ಹೀಗೆ ಮಾಡುವದರಿಂದ ವುಂಟಾಗುವ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನು ಗುರಿಯಾಗುವನು.

4. ಹರಾಜಿನಲ್ಲಿ ದರಖಾಸ್ತು ಮಾಡುವವರು ಆವರ ಸ್ವಂತಕ್ಕಾಗಿ ಸವಾಲು ಮಾಡುವ ಬಗ್ಯೆ ಅಥವಾ ಇತರರಿಗೋಸ್ಕರ ಸವಾಲ್ ಮಾಡುವ ಬಗ್ಯೆ ಸ್ಪಷ್ಟವಾಗಿ ಲಿಖಿತಮೂಲಕ ತಿಳಿಸಬೇಕು. ಹೀಗೆ ಮಾಡದೆ ಯಿದ್ದರೆ ಅಂಥಾವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಹೀಗೆ ಮಾಡುವ ಹರಾಜು ದಿವಾ೯ ಸಾಹೆಬರವರಿಂದ ಕಾಯಂ ಆಗುವ ವರಿಗೆ ಖೈದ್ ಆಗತಕ್ಕದ್ದಲ್ಲ. ದಿವಾ೯ ಸಾಹೆಬರವರು ಹರಾಜಿನಲ್ಲಿ ಮಾಡುವ ಸವಾಲ್ ಯಾವಾಗಲಾಗಲಿ ಯಾವ ಕಾರಣವನ್ನೂ ನಮೂದಿಸದೇ ಅಂಗೀಕರಿಸುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರ ವುಳ್ಳವರಾಗಿ ಯಿರುತ್ತಾರೆ.

6. ಹರಾಜಿನಲ್ಲಿ ಪಡದವರು ಪೂರಾ ಮೊಬಲಗು ಪಾವತಿ ಮಾಡಿ ದಿವಾ೯ ಸಾಹೆಬರವರಿಂದ ಹರಾಜು ಕಾಯಂ ಆದನಂತರ ಸ್ವತ್ತುಗಳು ಆವರ ಸುಪರ್ದು ಮಾಡಲ್ಪಡುತ್ತೆ. ಶಿವಾಯಿ ಹರಾಜು ಸರಟಿಫಿಕೇಟ್ ಸ್ಟೆ೯ ಮೊಹರಿನಿಂದ ಕೊಡಲ್ಪಡುತ್ತೆ.

7. ಈ ಕಟ್ಟಡಗಳ ಪ್ಲಾ೯ ಸಿಟಿ ಮ್ಯುನಿಸಿಪೆಲ್ ಆಫೀಸಿನಲ್ಲಿ ಯಿರುತ್ತೆ. ಜನಗಳು ಬಂದು ನೋಡಬಹುದು.